# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2494 |
| ಸದಸ್ಯರ ಹೆಸರು | : | ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | : | 23-03-2022 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಿಗೆ ಮಂಜೂರಾಗಿರುವ ಮಿನಿ ವಿಧಾನಸೌಧಗಳು ಎಷ್ಟು; ಅವು ಯಾವುವು; ಇವುಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು; (ವಿವರ ನೀಡುವುದು) | ಕಲಬುರಗಿ ಜಿಲ್ಲೆಯಲ್ಲಿ ಒಟ್ಟು 5 ತಾಲ್ಲೂಕುಗಳಲ್ಲಿ ತಾಲ್ಲೂಕು ಆಡಳಿತ ಸೌಧ ನಿರ್ಮಾಣವಾಗಿರುತ್ತದೆ.<br>ಆಳಂದ ತಾಲ್ಲೂಕು ಆಡಳಿತಸೌಧ ನಿರ್ಮಾಣಕ್ಕೆ ರೂ.11.50ಕೋಟಿಗಳು, ಸೇಡಂಗೆ ರೂ.9.85ಕೋಟಿಗಳ, ಚಿತ್ತಾಪೂರಕ್ಕೆ ರೂ.9.83ಕೋಟಿಗಳ, ಚಿಂಚೋಳಿಗೆ ರೂ.7.00ಕೋಟಿಗಳ ಮತ್ತು ಜೇವರ್ಗಿಗೆ ರೂ.1.27ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.<br><br>ಯಾದಗಿರಿ ಜಿಲ್ಲೆ ಒಟ್ಟು 2 ತಾಲ್ಲೂಕುಗಳಲ್ಲಿ ತಾಲ್ಲೂಕು ಆಡಳಿತ ಸೌಧ ನಿರ್ಮಾಣವಾಗಿರುತ್ತದೆ.<br>ಸುರಪೂರ ತಾಲ್ಲೂಕು ಆಡಳಿತ ಸೌಧ ನಿರ್ಮಾಣಕ್ಕೆ ರೂ.1.93 ಕೋಟಿಗಳ ಮತ್ತು ಶಹಾಪುರಕ್ಕೆ ರೂ.1.83 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.<br>ಮೇಲ್ಕಂಡ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನವನ್ನು ಪೂರ್ಣ ವೆಚ್ಚ ಮಾಡಲಾಗಿರುತ್ತದೆ. |
| ಆ) | ಈ ಮಿನಿ ವಿಧಾನಸೌಧಗಳನ್ನು ನಿರ್ಮಾಣ ಮಾಡಲು ಖರ್ಚಾದ ಅನುದಾನ ಎಷ್ಟು; (ವಿವರ ನೀಡುವುದು) | |
| ಇ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಿಂದ ವಿವಿಧ ಇಲಾಖೆಗಳಿಂದ ಸ್ವಂತ ಕಟ್ಟಡ/ ಕಛೇರಿಗೆ ಬೇಡಿಕೆ ಇರುವ ಪ್ರಕರಣಗಳು ಎಷ್ಟು? (ವಿವರ ನೀಡುವುದು) | ಕಲಬುರಗಿ ಜಿಲ್ಲೆಯ ಚಿಂಚೋಳಿ, ಆಳಂದ ಮತ್ತು ಸೇಡಂ ತಾಲ್ಲೂಕುಗಳಲ್ಲಿ ನಾಡಕಛೇರಿಗಳಿಗೆ ಬೇಡಿಕೆ ಇರುತ್ತದೆ.<br>ಯಾದಗಿರಿ ಜಿಲ್ಲೆಯ ತಾಲ್ಲೂಕಗಳಲ್ಲಿ ಪೋಲಿಸ್ ಇಲಾಖೆ, ಲೋಕಾಯುಕ್ತ, ಅಗ್ನಿ ಶಾಮಕ ದಳ , ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ , ತೋಟಗಾರಿಕಾ ವಿಶ್ವ ವಿದ್ಯಾಲಯ, ಪ್ರಾಥಮಿಕ ಆರೋಗ್ಯ ಕೇಂದ್ರ, ನ್ಯಾಯಲಯ ಕಟ್ಟಡ, ಪಶು ಆಸ್ಪತ್ರೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಲೋಕೋಪಯೋಗಿ ಇಲಾಖೆಗಳ ಸ್ವಂತ ಕಟ್ಟಡಕ್ಕಾಗಿ ಬೇಡಿಕೆ ಇರುತ್ತದೆ |

**ಕಂಇ 50 ಡಬ್ಲ್ಯೂಬಿಆರ್ 2022**

------

(ಆರ್. ಅಶೋಕ)
ಕಂದಾಯ ಸಚಿವರು.